ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ
ICAR JSS Krishi Vigyan Kendra
Suttur - 571 129, Nanjangud Taluk, Mysuru District
☏: 08221-232218 | 🖷: 08221-232377 | jsskvk@gmail.com | www.jsskvk.in

# ಸ್ವ ಸಹಾಯ ಸಂಘದ ಮಹಿಳೆಯರ ಜೊತೆ ಪ್ರಧಾನಿಯವರ ಮಾತು

ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ದಿನಾಂಕ 12 ಜುಲೈ 2018 ರಂದು ದೇಶದೆಲ್ಲೆಡೆಯಿರುವ ಸ್ವ ಸಹಾಯ ಸಂಘದ ಮಹಿಳೆಯರ ಜೊತೆ ನೇರ ಸಂವಾದ ಕಾರ್ಯಕ್ರಮ ನಡೆಸಿದರು. ಇದರ ನೇರ ಪ್ರಸಾರವನ್ನು ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಏರ್ಪಡಿಸಲಾಗಿತ್ತು ಸುಮಾರು ಸ್ವ ಸಹಾಯ ಸಂಘಗಳ 95 ಮಹಿಳೆಯರು ಈ ಕಾರ್ಯಕ್ರಮವನ್ನು ವೀಕ್ಷಿಸಿದರು. ಪ್ರಧಾನ ಮಂತ್ರಿಯವರು ಸ್ವ ಸಹಾಯ ಸಂಘದ ಮಹಿಳೆಯರ ಜೊತೆ ಮಾತನಾಡುತ್ತ, ದೇಶದಲ್ಲಿ ಒಟ್ಟು 45 ಲಕ್ಷ ಸ್ವ ಸಹಾಯ ಸಂಘಗಳಿದ್ದು, ಇವುಗಳಿಂದ ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಣೆಯಾಗುತ್ತಿದೆ ಮತ್ತು ತಮ್ಮ ಕುಟುಂಬದ ಹಾಗೂ ಸಮುದಾಯದ ಕಲ್ಯಾಣವೂ ಸಹ ಆಗುತ್ತಿದೆ ಎಂದು ಅಭಿಪ್ರಾಯಪಟ್ಟರು. ದಿನ್ ದಯಾಳ್ ಅಂತ್ಯೋದಯ ಯೋಜನೆ ಮೂಲಕ ಗ್ರಾಮೀಣ ಭಾಗದ ಯುವಜನರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗುತ್ತಿದ್ದು, ತರಬೇತಿ ಪಡೆದವರನ್ನು ಗ್ರಾಮೀಣ ಸ್ವರೋಜಗಾರ್ ಯೋಜನೆಗೆ ಜೋಡಿಸುವುದರ ಮೂಲಕ ಅವರಿಗೆ ಉದ್ಯೋಗವನ್ನು ದೊರಕಿಸಿಕೊಡಲಾಗುತ್ತಿದೆ, ಇದರಿಂದ ಯುವಜನರಲ್ಲಿ ಸಕರಾತ್ಮಕ ಬದಲಾವಣೆ ಕಂಡುಬರುತ್ತಿದೆ. ಈ ಯೋಜನೆಯ ಉಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೆಕೆಂದು ಕರೆ ನೀಡಿದರು.

ಸಂಘದ ಮುಖಾಂತರ ಹಣವನ್ನು ಬ್ಯಾಂಕುಗಳಿಗೆ ಸಂದಾಯ ಮಾಡುವುದರ ಮೂಲಕ ಮಹಿಳೆಯರು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸಹಾಯಕರ ರೂಪದಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರಧಾನಿಯವರ ಜೊತೆ ಸಂವಾದ ನಡೆಸುತ್ತಾ, ತೆಲಂಗಾಣ ಮಹಿಳೆಯೊಬ್ಬರು ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾ, ಹೇಳಿದ ಮಾತೆಂದರೆ ಸಂಘದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದರಿಂದ ಮಹಿಳೆಯರಲ್ಲಿ ಧೈರ್ಯದ ಜೊತೆಗೆ ಆತ್ಮವಿಶ್ವಾಸ ಮೂಡುತ್ತದೆ ಎಂದರು. ಈ ಮಹಿಳೆಯು ಸುಮಾರು 8 ರಾಜ್ಯಗಳನ್ನು ಸುತ್ತಿದ ಅನುಭವವನ್ನು ಹಂಚಿಕೊಂಡರು.

ಮಹಾರಾಷ್ಟ್ರದ ಮಹಿಳೆಯೊಬ್ಬರು ಕುರಿ ಹಾಲಿನಿಂದ ಸೋಪ್, ಐಸ್ ಕ್ರೀಮ್, ಪನ್ನೀರು, ಇನ್ನೂ ಮುಂತಾದ ಉತ್ಪನ್ನಗಳನ್ನು ತಯಾರು ಮಾಡಿ ಮಾರಾಟ ಮಾಡುತ್ತಿದ್ದೇವೆ ಎಂದು ತಮ್ಮ ಅನುಭವವನ್ನು ಜೊತೆಗೆ ಹಂಚಿಕೊಂಡರು. ಅದೇ ರಾಜ್ಯದ ಇನ್ನೊಬ್ಬ ಮಹಿಳೆಯು ಹಪ್ಪಳ ತಯಾರು ಮಾಡಿ ಮಾರಾಟ ಮಾಡಿ ತಮ್ಮ ಕುಟುಂಬದ ಆರ್ಥಿಕ ಮಟ್ಟವನ್ನು ಸುಧಾರಣೆ ಮಾಡುತ್ತಿರುವುದರ ಬಗ್ಗೆ ತಮ್ಮ ಅನುಭವವನ್ನು ಹಂಚಿಕೊಂಡರು.

ಗುಜರಾತಿನ ಮಹಿಳೆಯರು ಸೀತಾಫಲ್ ಮತ್ತು ಇತರೆ ಹಣ್ಣುಗಳ ತಿರುಳನ್ನು (ಪಲ್ಪ್) ಬೇರ್ಪಡಿಸಿ, ಐಸ್‌ಕ್ರೀಮ್ ಮತ್ತು ಇತರೆ ಆಹಾರ ಉತ್ಪನ್ನಗಳನ್ನು ತಯಾರಿಸುವ ಘಟಕಗಳಿಗೆ ಸರಬರಾಜು ಮಾಡುತ್ತಿದ್ದಾರೆ.

ಮಾನ್ಯ ಪ್ರಧಾನ ಮಂತ್ರಿಯವರು ತಮ್ಮ ಸಂವಾದದಲ್ಲಿ GeM (Government-e-Marketing) ವೆಬ್‌ಸೈಟ್ ಬಗ್ಗೆ ಮಾಹಿತಿ ನೀಡಿದರು, ಈ ವೆಬ್‌ಸೈಟ್ ಮೂಲಕ ಸ್ವ ಸಹಾಯ ಸಂಘಗಳು ನೊಂದಣಿ ಮಾಡಿಕೊಂಡು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಬಹುದು ಎಂದು ತಿಳಿಸಿದರು.

ಛತ್ತೀಸಗಡದ ಮಹಿಳೆಯರು ಮಾತನಾಡುತ್ತಾ ಮೌಲ್ಯವರ್ಧನೆ ಮೂಲಕ ಶೇ.30 ರಷ್ಟು ಲಾಭ ಗಳಿಸಬಹುದೆಂದು ತಮ್ಮ ಅನುಭವ ಹಂಚಿಕೊಂಡರು. ಬಿಹಾರದ ಮಹಿಳೆಯರು ಬಳೆ ತಯಾರಿಕೆ ಮತ್ತು ಮಾರಾಟದ ಬಗ್ಗೆ ಮಾತನಾಡಿದರು. ಮಧ್ಯ ಪ್ರದೇಶದ ಮಹಿಳೆಯರು ಫಿನೈಲ್, ಹ್ಯಾಂಡ್‌ವಾಷ್, ಸ್ಯಾನಿಟರಿ ನ್ಯಾಪ್ಕಿನ್ ಗಳನ್ನು ತಯಾರಿಸುವುದರ ಬಗ್ಗೆ ಪ್ರಧಾನಿಯವರ ಜೊತೆ ಅನುಭವ ಹಂಚಿಕೊಂಡರು. ರಾಜಸ್ಥಾನದಲ್ಲಿ ಕುರಿ ಸಾಕಾಣಿಕೆ ಮತ್ತು ಜಮೀನು ನೋಡಿಕೊಳ್ಳುವುದರ ಜೊತೆಗೆ ಸೋಲಾರ್ ಫಲಕಗಳನ್ನು ತಯಾರಿಸುತ್ತಿರುವುದರ ಬಗ್ಗೆ ತಮ್ಮ ಅನುಭವ ಹೇಳಿಕೊಂಡರು. ಪ್ರಧಾನ ಮಂತ್ರಿಯವರು ಇವರ ಕೆಲಸಗಳಿಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ, 1 ಲೀಟರ್ ಬಲ್ಬ್ ಎಂಬ ವೆಬ್ ಸೈಟ್ ಬಗ್ಗೆ ಮಾಹಿತಿ ನೀಡಿದರು. ಜೊತೆಗೆ ನರೇಂದ್ರ ಮೋದಿ ಆಪ್ ಬಗ್ಗೆ ವಿವರಿಸುತ್ತಾ, ಸ್ವ ಸಹಾಯ ಸಂಘದ ಮಹಿಳೆಯರು ತಮ್ಮ ಸಂಘದ ಕಾರ್ಯಚಟುವಟಿಕೆಗಳನ್ನು ಈ ಆಪ್ ನಲ್ಲಿ ಅಪ್‌ಲೋಡ್ ಮಾಡಿದರೆ ಪ್ರತಿ ತಿಂಗಳು ಕೊನೆಯ ಭಾನುವಾರ ನಡೆಯುವ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ನಿಮ್ಮ ಸಾಧನೆಗಳನ್ನು ಹಂಚಿಕೊಳ್ಳುತ್ತೇನೆಂದು ಪ್ರೋತ್ಸಾಹ ನೀಡಿದರು. ಈ ಕಾರ್ಯಕ್ರಮವು ಸ್ವ ಸಹಾಯ ಸಂಘದ ಮಹಿಳೆಯರಲ್ಲಿ ಆದಾಯ ತರುವ ಚಟುವಟಿಕೆಗಳನ್ನು ಪ್ರಾರಂಭಿಸಲು ಪ್ರೋತ್ಸಾಹ ಮತ್ತು ಹೊಸ ಉತ್ಸಾಹವನ್ನು ನೀಡಿತು.